# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1334

**ಸದಸ್ಯರ ಹೆಸರು** : ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸುವ ದಿನಾಂಕ** : 22.08.2025.

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಿಳಾ ಸಬಲೀಕರಣ ಉದ್ದೇಶಕ್ಕಾಗಿ ಗೃಹಲಕ್ಷ್ಮಿ ಯೋಜನೆಯಡಿ ಅರ್ಹ ಫಲಾನುಭವಿಗಳ ಖಾತೆಗೆ ಮಾಸಿಕ ರೂ.2000/-ಗಳನ್ನು ಜಮೆ ಮಾಡುತ್ತಿದ್ದು, ಈ ಯೋಜನೆ ಪ್ರಾರಂಭದಿಂದ ಅನೇಕ ಮಹಿಳೆಯರಿಗೆ ನಿರಂತರವಾಗಿ ಪ್ರತಿ ತಿಂಗಳು ರೂ.2000/-ಗಳಂತೆ ಜಮೆ ಮಾಡುತ್ತಾ ಬರಲಾಗಿದ್ದರೂ ಇತ್ತೀಚೆಗೆ ಹಲವು ತಿಂಗಳುಗಳಿಂದ ಅಲ್ಲಲ್ಲಿ ಮಹಿಳೆಯರು ಐಟಿ-ಜಿಎಸ್‌ಟಿ ಪಾವತಿದಾರರೆಂದು ಪರಿಗಣಿಸಿ ಹಣ ಸಂದಾಯ ಮಾಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹವರ ಸಂಖ್ಯೆ ಎಷ್ಟು; ಬಂದಿದ್ದಲ್ಲಿ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಾಗೂ ತಾಂತ್ರಿಕ ದೋಷದ ನೆಪವೊಡ್ಡಿ ನಿರಾಕರಿಸಲಾಗಿದೆ ಎನ್ನುವ ದೂರುಗಳು ಬಂದಿರುವುದು ನಿಜವೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಗೃಹಲಕ್ಷ್ಮಿ ಯೋಜನೆಯನ್ನು ದಿನಾಂಕ:17-07-2023 ರಂದು ಹೊರಡಿಸಲಾದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಅಂದರಂತೆ,<br>i. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ<br>ii. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ GST ರಿಟರ್ನ್ಸ್ ಸಲ್ಲಿಸುವವರಾಗಿದ್ದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅರ್ಹರಿರುವುದಿಲ್ಲ.<br><br>ಗೃಹಲಕ್ಷ್ಮಿ ಯೋಜನೆಯ ಅರ್ಜಿ ನೋಂದಣಿಯನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದೆ. ತದನಂತರ ಸರ್ಕಾರದ ದಿನಾಂಕ.06.06.2023ರ ಆದೇಶದಂತೆ ಫಲಾನುಭವಿ ಅಥವಾ ಆಕೆಯ ಪತಿ IT-GST ವ್ಯಾಪ್ತಿಗೆ ಒಳಪಡುವವರಾಗಿದ್ದಲ್ಲಿ ಕುಟುಂಬ ಪೋರ್ಟಲ್ ಮೂಲಕ ಫಲಾನುಭವಿ ಮತ್ತು ಆಕೆಯ ಪತಿಯ ಆಧಾರ್ ಸಂಖ್ಯೆಗೆ ಲಿಂಕ್ ಆಗಿರುವ ಪಾನ್ ಕಾರ್ಡ್ ಮೂಲಕ ಪರಿಶೀಲನೆಗೊಳಪಡಿಸಲಾಗುತ್ತದೆ. ಸದರಿ ಪರಿಶೀಲನೆಯ ನಂತರ ಕುಟುಂಬ ಪೋರ್ಟಲ್ ವತಿಯಿಂದ ನೀಡಲಾಗುವ ವರದಿಯನ್ವಯ ಫಲಾನುಭವಿಯು IT/GST Payee ಎಂದು Status ತೋರಿಸಲಾಗುತ್ತಿದೆ.<br><br>ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಲ್ಲಿ 1,08,417 ಆದಾಯ ತೆರಿಗೆ ಪಾವತಿದಾರರು ಹಾಗೂ 1,04,647 ಫಲಾನುಭವಿಗಳು GST ರಿಟರ್ನ್ಸ್ ಸಲ್ಲಿಸಿರುವವರಾಗಿದ್ದು, ಸದರಿಯರಿಗೆ ಗೃಹಲಕ್ಷ್ಮಿ ಮಾರ್ಗಸೂಚಿಯನ್ವಯ ಧನಸಹಾಯ ಪಾವತಿಸಲು ಅವಕಾಶವಿರುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.<br><br>ಗೃಹಲಕ್ಷ್ಮಿ ಯೋಜನೆಯಡಿ ಅರ್ಜಿ ನೋಂದಣಿ, ಪರಿಶೀಲನೆ ಹಾಗೂ ಧನಸಹಾಯ ಪಾವತಿ ಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಸಂಪೂರ್ಣವಾಗಿ ಆನ್‌ಲೈನ್‌ಮೂಲಕ ನಿರ್ವಹಿಸಲಾಗುತ್ತಿದೆ. |
| ಆ) | ಅಂತಹ ಮಹಿಳೆಯರು ಸಂಬಂಧಪಟ್ಟ ಇಲಾಖೆಯಿಂದ ತೆರಿಗೆ ಪಾವತಿದಾರರು ಅಲ್ಲವೆಂಬ ದಾಖಲೆಗಳನ್ನು ಸಂಬಂಧಪಟ್ಟವರಿಗೆ ಒದಗಿಸಿದ್ದಾಗಿಯೂ ಕೂಡ ಅವರಿಗೆ ಗೃಹಲಕ್ಷ್ಮಿ ಯೋಜನೆಯಡಿ ಅವರ ಖಾತೆಗೆ ಅವಶ್ಯಕ ಹಣವನ್ನು ಜಮೆ ಮಾಡಲಾರದ ಕಾರಣ ಅವರು ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ತಕ್ಷಣ ಅವರಿಗೆ ಹಣ ಜಮೆ ಮಾಡಲಾಗುವುದೇ? (ಮಾಹಿತಿ ನೀಡುವುದು). | |

**ಸಂಖ್ಯೆ: ಮಮಇ 153 ಮಮಅ 2025**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ -1

**ಶ್ರೀ ಪಿ. ಹೆಚ್.ಪೂಜಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 125(1334)**

| ಕ್ರ. ಸಂ. | ಜಿಲ್ಲೆಯ ಹೆಸರು | IT ಫಲಾನುಭವಿಗಳ ಸಂಖ್ಯೆ | GST ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 2978 | 2647 |
| 2 | ಬಳ್ಳಾರಿ | 2135 | 2732 |
| 3 | ಬೆಳಗಾವಿ | 9670 | 8230 |
| 4 | ಬೆಂಗಳೂರು (ಗ್ರಾ) | 2519 | 2285 |
| 5 | ಬೆಂಗಳೂರು (ನ) | 18034 | 17888 |
| 6 | ಬೀದರ್ | 1737 | 2326 |
| 7 | ಚಾಮರಾಜನಗರ | 1162 | 1462 |
| 8 | ಚಿಕ್ಕಬಳ್ಳಾಪುರ | 2042 | 2104 |
| 9 | ಚಿಕ್ಕಮಗಳೂರು | 2347 | 1832 |
| 10 | ಚಿತ್ರದುರ್ಗ | 2089 | 2224 |
| 11 | ದಕ್ಷಿಣ ಕನ್ನಡ | 6958 | 3531 |
| 12 | ದಾವಣಗೆರೆ | 2678 | 2754 |
| 13 | ಧಾರವಾಡ | 3694 | 3482 |
| 14 | ಗದಗ | 1320 | 1648 |
| 15 | ಹಾಸನ | 3792 | 3813 |
| 16 | ಹಾವೇರಿ | 2258 | 2734 |
| 17 | ಕಲಬುರಗಿ | 3253 | 3649 |
| 18 | ಕೊಡಗು | 1656 | 1131 |
| 19 | ಕೋಲಾರ | 2499 | 2629 |
| 20 | ಕೊಪ್ಪಳ | 1727 | 2210 |
| 21 | ಮಂಡ್ಯ | 4223 | 3388 |
| 22 | ಮೈಸೂರು | 4362 | 5293 |
| 23 | ರಾಯಚೂರು | 2338 | 3041 |
| 24 | ಬೆಂಗಳೂರು ದಕ್ಷಿಣ | 3001 | 2924 |
| 25 | ಶಿವಮೊಗ್ಗ | 3287 | 3144 |
| 26 | ತುಮಕೂರು | 4328 | 4760 |
| 27 | ಉಡುಪಿ | 3728 | 1769 |
| 28 | ಉತ್ತರಕನ್ನಡ | 3571 | 3021 |
| 29 | ವಿಜಯನಗರ | 1344 | 1689 |
| 30 | ವಿಜಯಪುರ | 2765 | 2754 |
| 31 | ಯಾದಗಿರಿ | 922 | 1553 |
| ಒಟ್ಟು | | **108417** | **104647** |
| ಒಟ್ಟು IT-GST | | | **213064** |